# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560 001

ಸಿ4(7)ಪ್ರೌಶಿಹೆಶಿಸ್ಥ01/2008-09 ದಿನಾಂಕ: 18.04.2011

**ಜ್ಞಾಪನ**

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರದ ಸಮಸಂಖ್ಯೆ ದಿನಾಂಕ: 02.04.2011.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸುವ ಮತ್ತು ಸ್ಥಳಾಂತರಿಸುವ ಬಗ್ಗೆ. ದಿನಾಂಕ: 07.04.2011, 11.04.2011 ರಿಂದ 13.04.2011 ರವರೆಗೆ ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿ ಚರ್ಚೆಗೆ ಬಂದ ಅಂಶಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದೆ.

| ಕ್ರಮ ಸಂಖ್ಯೆ | ಸಭೆಯಲ್ಲಿ ಚರ್ಚೆಗೆ ಬಂದ ಅಂಶ | ಸ್ಪಷ್ಟೀಕರಣ |
|---|---|---|
| 1 | ಮೂರು ವಿಭಾಗಗಳಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಟಿ.ಜಿ.ಟಿ & ಸಹಶಿಕ್ಷಕರು (ಪಿ.ಸಿ.ಎಂ) ಈ ಎರಡು ಹುದ್ದೆಗಳಿದ್ದಲ್ಲಿ ಯಾವ ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು. | ಸದರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಅತಿ ಹೆಚ್ಚಿನ ಕಾಲಾವಧಿಗೆ ಹುದ್ದೆಯನ್ನು ಧಾರಣ ಮಾಡಿದ ಶಿಕ್ಷಕರನ್ನು ಹೆಚ್ಚುವರಿ ಎಂದು ಪರಿಗಣಿಸಬೇಕು. ಉಳಿದ ಶಿಕ್ಷಕರು ಎಸ್.ಎಸ್.ಎ-ಟಿ.ಜಿ.ಟಿ ಹುದ್ದೆಯಲ್ಲಿ ವೇತನ ಡ್ರಾ ಮಾಡಬೇಕು. |
| 2 | ಸರ್ಕಾರಿ ಪ್ರೌಢಶಾಲೆಗಳಿಗೆ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭಿಸಲು ಅನುಮತಿ ನೀಡಿರುವಲ್ಲಿ, ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವಾಗ ಆಂಗ್ಲ ಮಾಧ್ಯಮ ವಿಭಾಗಗಳನ್ನು ಪರಿಗಣಿಸಿ ಲೆಕ್ಕಾಚಾರ ಮಾಡಬೇಕು. | ಹೌದು, ಹೆಚ್ಚುವರಿಯಾಗಿದ್ದಾಗ ಮಂಜೂರಾದ ಹುದ್ದೆಗಳು ಆ ಶಾಲೆಯಲ್ಲಿದ್ದಾಗ, ಎಲ್ಲಾ ಮಾಧ್ಯಮ ವಿಭಾಗಗಳನ್ನು ಪರಿಗಣಿಸಿ ಲೆಕ್ಕಾಚಾರ ಮಾಡಬೇಕು. |
| 3 | ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರಿರಬೇಕಾದಲ್ಲಿ, ಎಷ್ಟು ವಿಭಾಗಗಳಿರಬೇಕು. | ಒಂದು ಶಾಲೆಯಲ್ಲಿ 10 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ, ಎರಡು ವಿಶೇಷ ಶಿಕ್ಷಕರಿಗೆ ಅವಕಾಶ ಇದೆ. 20 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ, ಮೂರು ವಿಶೇಷ ಶಿಕ್ಷಕರಿಗೆ ಅವಕಾಶ ಇದೆ. |
| 4 | ವಿದ್ಯಾರ್ಥಿ ಸಂಖ್ಯೆಯ ಹೆಚ್ಚಳದಿಂದ ಹೆಚ್ಚುವರಿ ವಿಭಾಗ ತೆರೆಯಲಾಗಿದ್ದು, ಅಂತಹ ಶಾಲೆಗಳಿಗೆ, ಹೆಚ್ಚುವರಿ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸಬಹುದೇ? | ಜಿಲ್ಲೆಯಲ್ಲಿರುವ ಶಿಕ್ಷಕರ ಲಭ್ಯತೆ ಆಧರಿಸಿ ಅಗತ್ಯವಿರುವ ಶಾಲೆಗಳಿಗೆ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸಬಹುದು. |

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಗೌರವಪೂರ್ವಕವಾಗಿ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001 ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಇವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
4. ಸಂಬಂಧಿಸಿದ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ
5. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
6. ಕಛೇರಿ ಪ್ರತಿ.